ಕೃತಿಗಳು ಮಾರಾಟವಾಗುತ್ತಿವೆಯೇ ಎಂದು ತಿಳಿಯುವ ಕುತೂಹಲವಿತ್ತು. ಹಾಗೊಮ್ಮೆ ಅವರು ಅಂಗಡಿಗೆ ಭೇಟಿ ನೀಡಿದರಂತೆ. ಪುಸ್ತಕ ಚೆನ್ನಾಗಿ ಮಾರಾಟವಾಗುತ್ತಿದೆ ಎಂದರಲ್ಲದೆ ವಿಚಾರಿಸಿಕೊಂಡು ಬಂದು ಪುಸ್ತಕವನ್ನು ಕೊಂಡುಕೊಂಡು ಹೋಗುತ್ತಿದ್ದಾರೆ ಎಂಬ ವಾಸ್ತವ ತಿಳಿಯಿತು. ಸಾಹಿತ್ಯ ಲೋಕದ ಗಣ್ಯರೆನಿಸಿದವರು ಅದರಲ್ಲಿಯೂ ಶಕೀಲಾ ಅನುವಾದದಿಂದ ಗಂಗಾಧರನ್ ಗೌರವ ನಷ್ಟವಾಯಿತು ಎಂದು ಹೇಳಿದ ಸಾಹಿತಿಗಳೂ ಪುಸ್ತಕ ಖರೀದಿಸಿದ ಬಗೆಗೆ ಅಂಗಡಿಯಾತನಿಂದ ಮಾಹಿತಿ ದೊರೆಯಿತು. ಪುಸ್ತಕ ವರ್ಷದಲ್ಲಿಯೇ ಮರುಮುದ್ರಣವನ್ನೂ ಕಂಡಿತು.

ಡಾಕ್ಟರೊಬ್ಬರು ನಟಿ ಶಕೀಲಾ ಅನುವಾದವನ್ನು ಓದಿ ಆಕೆಯನ್ನು ಮದುವೆಯಾಗುವ ಇಚ್ಛೆ ವ್ಯಕ್ತಪಡಿಸಿದರಲ್ಲದೆ, ಅದನ್ನು ನೆರವೇರಿಸಿಕೊಡುವಂತೆ ಗಂಗಾಧರನ್ ಅವರಿಗೆ ದುಂಬಾಲು ಬಿದ್ದಿದ್ದರಂತೆ. ನಾನು ಮದುವೆ ಬ್ರೋಕರ್ ಅಲ್ಲ. ನಾನು ಟ್ರಾನ್ಸ್‌ಲೇಟರ್ ಮಾತ್ರ ಎಂದು ಹೇಳಿ ಅದಕ್ಕೆ ವಿರಾಮ ಹಾಕಿದರು. ಆದರೂ ಆ ಡಾಕ್ಟರ್ ನೀವು ಯಾವಾಗ ಬೇಕಾದರೂ ನನ್ನ ಕ್ಲಿನಿಕ್‌ಗೆ ಬನ್ನಿ ನಿಮಗೆ ಉಚಿತ ಚಿಕಿತ್ಸೆ, ನಟಿ ಶಕೀಲಾ ಅನುವಾದಕ್ಕಾಗಿ ಇದು ನಿಮಗೆ ನನ್ನ ಕೊಡುಗೆ ಎಂದು ಹೇಳಿದರಂತೆ. ಒಂದಿಬ್ಬರು ಸಿನಿಮಾ ನಟಿಯರು ಗಂಗಾಧರನ್ ಅವರಿಗೆ ಕರೆಮಾಡಿ ನಮ್ಮ ಬದುಕು ಇದಕ್ಕಿಂತಲೂ ದಾರುಣವಾಗಿದೆ ಎಂದು ಹೇಳಿದ್ದನ್ನು ಅವರು ನೆನಪಿಸಿಕೊಂಡುದಿದೆ. 'ಶಕೀಲಾ' ಕನ್ನಡದಲ್ಲಿ ಚಲನಚಿತ್ರವಾಗಿಸುವ ಪ್ರಯತ್ನ ಸಹ ನಡೆದಿತ್ತು. ಗಂಗಾಧರನ್ ಹೇಳಿದಂತೆ ನಟಿ ಶಕೀಲಾ ಅನುವಾದ ಅವರಿಗೆ ಜನಪ್ರಿಯತೆಯನ್ನೂ ಗೌರವವನ್ನೂ ತಂದುಕೊಟ್ಟಿದೆ. ಅನುವಾದ ಕೃತಿಯೊಂದು ಸಾಮಾನ್ಯ ಓದುಗರನ್ನು ತಲುಪುವುದು ಇದರಿಂದ ಸಾಧ್ಯವಾಯಿತು. ಶಕೀಲಾ ಅನುವಾದಕ್ಕಾಗಿ ಪ್ರಕಾಶಕರಿಂದ ಅನುವಾದಕರಿಗೆ, ಮೂಲ ಲೇಖಕರಿಗೆ ನಟಿ ಶಕೀಲಾಗೆ ಗೌರವ ಸಂಭಾವನೆಯೂ ದೊರಕಿದೆ. ನಟಿ ಶಕೀಲಾ ಅನುವಾದವನ್ನು ಪ್ರಕಟಿಸಲು ಅವರು ಅನೇಕ ಪ್ರಕಾಶಕರನ್ನು ಭೇಟಿಯಾಗಿದ್ದರು. ಪ್ರತಿಷ್ಠಿತ ಪ್ರಕಾಶಕರೆಲ್ಲ ನಿರಾಕರಿಸಿ ಕೊನೆಗೆ ಸಾವಣ್ಣ ಪ್ರಕಾಶನದವರು ಮುಂದಾದರು. ಇದು ಪ್ರಕಾಶಕರಿಗೂ ಆರ್ಥಿಕವಾಗಿ ಹಾನಿ ಮಾಡಲಿಲ್ಲ. ಅನುವಾದಕರ ಗೌರವಕ್ಕೂ ಚ್ಯುತಿ ತರಲಿಲ್ಲ ಎಂಬುದನ್ನು ಗಂಗಾಧರನ್ ಹೇಳುತ್ತಿದ್ದರು. ಮುಂದೆ ಕೆಲವರು ಶಕೀಲಾ ಗಂಗಾಧರನ್ ಎಂದು ಕರೆದಾಗಲೂ ಸಂಕೋಚಪಡಲಿಲ್ಲ.



ಕಮಲಾದಾಸ್ ಮಲಯಾಳಂನಲ್ಲಿ ಸುಮಾರು 240 ಕಥೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ 235 ಕಥೆಗಳನ್ನು ಗಂಗಾಧರನ್ ಒಂದು ವ್ರತದಂತೆ ಅನುವಾದ ಮಾಡಿದ್ದಾರೆ. ಅವು ಮೂರು ಸಂಕಲನಗಳಲ್ಲಿ ಕನ್ನಡದಲ್ಲಿ ಪ್ರಕಟವಾಗಿವೆ. ಕಮಲಾದಾಸ್ ಅವರದು ಪುಟ್ಟ ಪುಟ್ಟ ಕಥೆಗಳು. ಬೋಲ್ಡ್ ಆದ ಅವರ ಚಿಂತನೆಗಳು ಕನ್ನಡ ಓದುಗರನ್ನು ಸೆಳೆದಿದ್ದುವು. ಆರಂಭದ ಕೆಲವು ಕಥೆಗಳಿಗೆ ಅನುವಾದದ ಮೂಲಕ ಓದುಗರಿಂದ ಬಂದ ಮೆಚ್ಚು ನುಡಿಗಳಿಗೆ ಮನಸೋತು